# ವಚನರೂಪಿ ಶ್ರೀರಾಮಕೃಷ್ಣ



**ಭಾ**ಗವತ ಮಹಾಪುರಾಣವು ಭಕ್ತಿಶಾಸ್ತ್ರದ ಸರ್ವಶ್ರೇಷ್ಠ ಗ್ರಂಥವೆಂದು ಪ್ರಸಿದ್ಧವಾಗಿದೆ. ಅದರಲ್ಲಿ ಬರುವ ಒಂದು ಶ್ಲೋಕ ಮನನೀಯ.

**ಪ್ರವಿಷ್ಟಃ ಕರ್ಣರಂಧ್ರೇಣ ಸ್ವಾನಾಂ**
**ಭಾವಸರೋರುಹಮ್ ।**
**ಧುನೋತಿ ಶಮಲಂ ಕೃಷ್ಣಃ ಸಲಿಲಸ್ಯ**
**ಯಥಾ ಶರತ್ ॥** (೨.೮.೫)

"ಶ್ರೀಕೃಷ್ಣನು ತನ್ನ ಭಕ್ತರ ಕಿವಿಗಳ ಮೂಲಕ ಅವರ ಹೃದಯಕಮಲವನ್ನು ಪ್ರವೇಶಿಸಿ, ಶರತ್ಕಾಲವು ನೀರಿನ ಕೊಳೆಯನ್ನು ತೊಳೆದುಬಿಡುವಂತೆ ಅವರ ಪಾಪಗಳನ್ನು ಕಳೆಯುತ್ತಾನೆ."

ಭಕ್ತರು ಭಗವಂತನ ಲೀಲಾಕಥನವನ್ನು ಆಲಿಸುತ್ತಾರೆ. ಅದು ಅವರ ಕಿವಿಗಳಿಗೆ ಬೀಳು ತ್ತಿರುತ್ತದೆ. ಆ ಲೀಲಾಕಥನ ಬೇರೆಯಲ್ಲ, ಸಾಕ್ಷಾತ್ ಭಗವಂತ ಬೇರೆಯಲ್ಲ. ಭಗವಂತನೇ ಲೀಲಾಕಥನದ ರೂಪದಲ್ಲಿ ಭಕ್ತರ ಕಿವಿಗಳನ್ನು ಪ್ರವೇಶಿಸಿ, ಪಾಪಗಳನ್ನು ಕಳೆಯುತ್ತಾನೆ.

'ಶ್ರೀರಾಮಕೃಷ್ಣ ವಚನವೇದ'ವೂ ಹಾಗೆಯೇ. ಇಲ್ಲಿ ಶ್ರೀರಾಮಕೃಷ್ಣರು ವಚನಗಳ ರೂಪದಲ್ಲಿ ಕಂಡುಬರುತ್ತಾರೆ. ಅವರಾಡುವ ಪ್ರತಿಯೊಂದು ಮಾತೂ ಅವರ ದೈವೀಭಾವವನ್ನು ಹೊರಸೂಸುತ್ತಿರುತ್ತದೆ; ಅತ್ಯಂತ ಹೃದಯಂಗಮವಾಗಿ ಓದುಗನ ಆಧ್ಯಾತ್ಮಿಕಭಾವವನ್ನು ಉದ್ದೀಪನಗೊಳಿಸುತ್ತದೆ. ಹೀಗೆ ಶ್ರೀರಾಮ ಕೃಷ್ಣರ ವಾಕ್‌ಶರೀರವೇ 'ಶ್ರೀರಾಮಕೃಷ್ಣ ವಚನವೇದ' ಎಂದರೆ ತಪ್ಪಾಗಲಾರದು.

'ಶ್ರೀರಾಮಕೃಷ್ಣ ವಚನವೇದ' ವು ಗುರುದೇವರ ಮಾತುಗಳ ಸಂಗ್ರಹ ಮಾತ್ರವಲ್ಲ, ಅವರ ಜೀವನದರ್ಶನ ಕೂಡ ಹೌದು. ಇಲ್ಲಿ ಧರ್ಮವು ಆಡಂಬರವಾಗದೆ ತನ್ನ ಸಾರ್ಥಕತೆಯನ್ನು ಕಂಡುಕೊಳ್ಳುತ್ತದೆ; ಅಧ್ಯಾತ್ಮವು ಅನುಭಾವದ ರೂಪವನ್ನು ತಾಳುತ್ತದೆ; ಭಗವಂತನು ಬರಿಯ ಪ್ರತಿಮೆಯಾಗದೆ ಜೀವಂತ ಸಾನ್ನಿಧ್ಯವನ್ನು ಪಡೆದುಕೊಳ್ಳುತ್ತಾನೆ. ಹೀಗೆ ಶ್ರೀರಾಮಕೃಷ್ಣರ ಅನುಭಾವವೇ ಇಲ್ಲಿ ವಾಗ್ಝರಿಯಾಗಿ ಹರಿದುಬಂದಿದೆ; ಅವರ ಅಪಾರ ಮಾನವಾನುಕಂಪವು 'ವಚನವೇದ' ಎಂಬ ಸಾಹಿತ್ಯ ಕೃತಿಯ ರೂಪವನ್ನು ತಾಳಿದೆ.

ಪ್ರತಿಯೊಂದು ತಾತ್ತ್ವಿಕ ಅಧ್ಯಯನದಲ್ಲೂ, **ಮಾನವ, ಜಗತ್ತು** ಮತ್ತು **ಭಗವಂತ** – ಈ ತತ್ತ್ವಗಳ ವಿವರಣೆ, ವಿಶ್ಲೇಷಣೆಗಳು ಬಂದೇ ಬರುತ್ತವೆ. ವಚನವೇದವು ಮೇಲುನೋಟಕ್ಕೆ ಬರಿಯ ಮಾತುಗಳ ಹಂದರವೆಂದೆನಿಸಿದರೂ, ಗಹನ ವಿಚಾರಗಳನ್ನು ಒಳಗೊಂಡ ಆಧ್ಯಾತ್ಮಿಕ ಗ್ರಂಥ. ಹೀಗಾಗಿ ಶ್ರೀರಾಮಕೃಷ್ಣರ ಸಂವಾದವನ್ನು ನಾವು ಹಗುರವಾಗಿ ತೆಗೆದುಕೊಳ್ಳಬಾರದು. ಕೇವಲ ಮನಶ್ಶಾಂತಿಗೋ ಇಲ್ಲವೇ ಪಾರಾಯಣಕ್ಕಾಗೋ ಇರುವ ಪುಣ್ಯಗ್ರಂಥವೆಂಬಂತೆ ಮಾತ್ರ ಭಾವಿಸಬಾರದು. ಅದರಲ್ಲಿ ಬರುವ ತಾತ್ತ್ವಿಕ ವಿಷಯಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಬೇಕು. ಆ ಮೂಲಕ ಶ್ರೀರಾಮಕೃಷ್ಣ–ಜ್ಞಾನಸಾಗರದ ಕೆಲವು ಹನಿಗಳನ್ನಾದರೂ ನಮ್ಮ ಮೇಲೆ ಸಿಂಪಡಿಸಿಕೊಂಡು ಕೃತಾರ್ಥರಾಗಬೇಕು.

### ಮಾನವ ಜೀವಿತದ ಅರ್ಥ

ಮಾನವನೆಂದರೆ ಯಾರು? ಶ್ರೀರಾಮಕೃಷ್ಣರು ಇದಕ್ಕೆ ಸರಳವಾದ ಉತ್ತರವನ್ನು ಕೊಡುತ್ತಾರೆ. ಅವರ ಪ್ರಕಾರ, ದೇವರೇ ಮನುಷ್ಯನಂತೆ ಆಡುತ್ತಿರುವನು. ಬಂಧನದಲ್ಲಿರುವ ಜೀವವೇ ಮನುಷ್ಯ. ಅಹಂಕಾರದ ದೆಸೆಯಿಂದ ಅವನು ಹಲವು ಉಪಾಧಿಗಳಲ್ಲಿ ಬದ್ಧನಾಗಿದ್ದಾನೆ. ಹೀಗಾಗಿ ತನ್ನ ನಿಜಸ್ವರೂಪವನ್ನು ಮರೆತಿದ್ದಾನೆ. ಮನುಷ್ಯರು ಬೇರೆ ಬೇರೆ ಎಂದು ಕಂಡುಬಂದರೂ, ಅವರಲ್ಲಿರುವ ಅಂತಸ್ಸತ್ವ ಒಂದೇ. ಶ್ರೀರಾಮಕೃಷ್ಣರು ಮನುಷ್ಯರನ್ನು ತಲೆದಿಂಬಿನ ಚೀಲಗಳು ಎಂದು ಕರೆಯುತ್ತಾರೆ. ಅವುಗಳಿಗೆ ಬಗೆಬಗೆಯ ಬಣ್ಣಗಳಿರುತ್ತವೆ. ಹಾಗೆಯೇ ಮನುಷ್ಯರು ಕೂಡ ಬಗೆಬಗೆಯ ಆಕಾರ ಮತ್ತು ಗುಣಗಳನ್ನು ಹೊಂದಿರುತ್ತಾರೆ. ಆದರೆ, ಪ್ರತಿ ತಲೆದಿಂಬಿನ ಚೀಲದ ಒಳಗೂ ಒಂದೇ ರೀತಿಯ ಹತ್ತಿ ಇರುವಂತೆ, ಒಬ್ಬನೇ ಪರಮಾತ್ಮನು ಎಲ್ಲರಲ್ಲಿಯೂ ಇರುತ್ತಾನೆ.

ಎಲ್ಲವೂ ನಿನ್ನಿಚ್ಛೆಯಂತೆ ನಡೆದಿರಲು
ನೀನೆ ಭವಸಾಗರವ ದಾಟಿಸುವ ಹಡಗು
ನಿನ್ನ ಇಚ್ಛೆಯ ನೀನು ಪೂರೈಸುತಿರಲು
ತಮ್ಮ ಗೈಮೆಯಿದೆಂದು ತಿಳಿವರೀ ಜನರು!

ನೀನು ಚಾಲಕ ಶಕ್ತಿ, ನಾನೊಂದು ಯಂತ್ರ!
ನಾನೊಂದು ಬರಿಯ ಮನೆ, ನೀನದರ ಮಂತ್ರ!
ನಾನೊಂದು ರಥವಾಗೆ, ನೀನದರ ರಥಿಕ
ನೀ ನಡೆಸೆ ನಾನಡೆವೆ; ನಿನ್ನದೀ ಲೋಕ

– 'ವಚನವೇದ' ದ ಹಾಡು

ಹೀಗೆ ಶ್ರೀರಾಮಕೃಷ್ಣರು ಮಾನವನನ್ನು ಅಲ್ಪನೆಂದು ಭಾವಿಸುವುದಿಲ್ಲ. ಪರಮಾತ್ಮನ ಆಕೃತಿಯೆಂದೇ ಬಗೆಯುತ್ತಾರೆ. ಈ ತಿಳಿವಳಿಕೆಯಿಂದ ಮಾನವಜೀವಿತಕ್ಕೆ ಒಂದು ಅರ್ಥ ಬರುತ್ತದೆ; ಉದ್ದೇಶ ಗೋಚರವಾಗುತ್ತದೆ; ಸಾಧನೆಯ ಮಾರ್ಗ ತೆರೆಯುತ್ತದೆ. ಮಾನವಜೀವಿತದಲ್ಲಿ ನಾವು ಮಾಡುವ ಕರ್ತವ್ಯ ಮತ್ತು ಆಚರಣೆಗಳು ಒಂದು ಮಹಾನ್ ಧ್ಯೇಯವನ್ನು ಹೊಂದಿರಬೇಕು. ಆಗ ಮಾತ್ರವೇ ಜೀವನವು ಅರ್ಥವತ್ತಾಗುತ್ತದೆ, ಸಮೃದ್ಧವಾಗುತ್ತದೆ. ಭಗವತ್ಸಾಕ್ಷಾತ್ಕಾರವೇ ಆ ಧ್ಯೇಯವೆಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ನಾವು ನೋಡುತ್ತಿರುವ ಜಗತ್ತಿಗೆ ಅರ್ಥ ಬರುವುದು ಭಗವಂತನಿಂದಲೇ. ಆದ್ದರಿಂದ ಮೊದಲು ನಮಗೆ ಅವಶ್ಯವಾಗಿರುವುದು ಭಗವಂತನ ಸಾಕ್ಷಾತ್ಕಾರ. **ಮೊದಲು ಭಗವಂತ, ಬಳಿಕ ಜೀವ, ಜಗತ್ತು.** ಆದ್ದರಿಂದ ಈ ಸೃಷ್ಟಿಯ ಬಗ್ಗೆ ನಾವು ಹೆಚ್ಚು ತಲೆಕೆಡಿಸಿಕೊಳ್ಳಬಾರದು. ಜಗತ್ತಿಗೆ ಮನುಷ್ಯ ಬಂದಿರುವುದು ಭಗವಂತನನ್ನು ಪಡೆದುಕೊಳ್ಳುವುದಕ್ಕೆ. ಅದನ್ನು ಮರೆತು ಉಳಿದ ವಿಷಯಗಳಿಗೆ ಮನಸ್ಸನ್ನು ಹಚ್ಚುವುದು ಒಳ್ಳೆಯದಲ್ಲ. ಇದು ಶ್ರೀರಾಮಕೃಷ್ಣರು ಮಾನವ ಜನಾಂಗಕ್ಕೆ ನೀಡುವ ಸಂದೇಶ.

ಈ ಉದ್ದೇಶದ ಸಾಧನೆಗಾಗಿಯೇ ನಮ್ಮೆಲ್ಲ ಕರ್ತವ್ಯಗಳೂ ತೊಡಗಬೇಕು. ಈ ವಿಷಯದಲ್ಲಿ ಶ್ರೀರಾಮಕೃಷ್ಣರು ಬಂಕಿಮಚಂದ್ರ ಚಟ್ಟೋಪಾಧ್ಯಾಯನಿಗೆ ಹೇಳುವ ಮಾತು ಬಹಳ ಮಾರ್ಮಿಕವಾದುದು: "ಜೀವನದ ಕರ್ತವ್ಯವೇನು? ಬೇರೆ ಏನು, ಆತನಿಗೆ (ಭಗವಂತನಿಗೆ) ಶರಣಾಗುವುದು ಮತ್ತು ಯಾವುದರಿಂದ ಆತನನ್ನು ಪಡೆಯಬಹುದೋ, ಯಾವುದರಿಂದ ಆತನ ದರ್ಶನ ಹೊಂದಬಹುದೋ ಅದಕ್ಕಾಗಿ ಪ್ರಾರ್ಥನೆ ಮಾಡುವುದು." ಆದರೆ, ಸಂಸಾರದ ಕರ್ತವ್ಯದಿಂದ ದೂರಸರಿಯಬಾರದು. ನಿಷ್ಕಾಮಕರ್ಮ ಮಾಡುವುದನ್ನು ಕಲಿಯಬೇಕು. ಹಾಗೆಂದರೇನು? ಶ್ರೀರಾಮಕೃಷ್ಣರು ಅದನ್ನು ನಮಗೆ ಹೀಗೆ ತಿಳಿಸಿಕೊಡುತ್ತಾರೆ: "ಸಂಸಾರಿ ನಿಜವಾದ ಭಕ್ತನಾದರೆ, ಅನಾಸಕ್ತನಾಗಿ ಕೆಲಸಕಾರ್ಯಗಳನ್ನು ಮಾಡುತ್ತಾನೆ. ತನ್ನ ಕರ್ಮದ ಫಲ ಲಾಭದಾಯಕವಾಗಿದ್ದರೂ ಸರಿಯೆ, ನಷ್ಟದಾಯಕವಾಗಿದ್ದರೂ ಸರಿಯೆ, ಸುಖದಾಯಕವಾಗಿದ್ದರೂ ಸರಿಯೆ, ದುಃಖದಾಯಕವಾಗಿದ್ದರೂ ಸರಿಯೆ ಎಲ್ಲವನ್ನೂ ಭಗವಂತನಿಗೆ ಅರ್ಪಿಸಿಬಿಡುತ್ತಾನೆ. ಹಗಲಿರುಳೂ ಭಕ್ತಿಗಾಗಿ ಪ್ರಾರ್ಥನೆ ಮಾಡುತ್ತಾನೆ. ಮತ್ತೆ ಬೇರೆ ಯಾವುದಕ್ಕೂ ಪ್ರಾರ್ಥನೆ ಮಾಡುವುದಿಲ್ಲ. ಇದಕ್ಕೇ ನಿಷ್ಕಾಮಕರ್ಮ ಎಂದು ಹೆಸರು."

ಈ ಬಗೆಯ ಸಾಧನಾಮಾರ್ಗದಲ್ಲಿ ಬಹಳ ಅಡ್ಡಿ ಆತಂಕಗಳು ಎದುರಾಗುತ್ತವೆ; ಅನೇಕ ಸಮಸ್ಯೆಗಳು ಬರುತ್ತವೆ. ಅವುಗಳನ್ನು ಹೇಗೆ ಪರಿಹರಿಸಿಕೊಳ್ಳಬೇಕು? ಶ್ರೀರಾಮಕೃಷ್ಣರ ಪ್ರಕಾರ ಸಂಸಾರದಲ್ಲಿ ನಿರ್ಲಿಪ್ತತೆಯಿಂದ ಇರುವುದೇ ಎಲ್ಲ ಸಮಸ್ಯೆಗಳಿಗೆ ಪರಿಹಾರ. ಅದಕ್ಕಾಗಿ ಸಂಸಾರದಲ್ಲಿ ಕಾಲಿಡುವ ಮುನ್ನವೇ ಸಾಧನೆಯಿಂದ ಮನಸ್ಸನ್ನು ಸ್ಥಿರಮಾಡಿಕೊಳ್ಳಬೇಕು. ಅದು ಹೇಗೆ ಎಂದರೆ, ಗಿಡ ಚಿಕ್ಕದಿರುವಾಗ ಬೇಲಿಯ ಆವಶ್ಯಕತೆ ಇರುತ್ತದೆ. ಆದರೆ ಬುಡ ದಪ್ಪವಾಯಿತು ಎಂದರೆ, ಆನೆ ತಂದು ಕಟ್ಟಿದರೂ ಅದಕ್ಕೆ ಏನೂ ಆಗದು. ಅಂತಹ ಆದರ್ಶ ಗೃಹಸ್ಥನ ಬಗ್ಗೆ ಅವರು ಈಶಾನನೆಂಬ ಭಕ್ತನಿಗೆ ಹೀಗೆ ಹೇಳುತ್ತಾರೆ: "ಯಾವ ಸಂಸಾರಿಯು, ಭಗವಂತನ ಪಾದಪದ್ಮಗಳಲ್ಲಿ ಭಕ್ತಿಯನ್ನಿಟ್ಟು ಸಂಸಾರವನ್ನು ನಡೆಸಿಕೊಂಡುಹೋಗುತ್ತಾನೋ ಆತನೇ ಧನ್ಯ, ಆತನೇ ವೀರಪುರುಷ. ಮತ್ತೆ ಅವನನ್ನು ಕೆಸರಿನ ಮೀನಿಗೆ ಹೋಲಿಸಬಹುದು. ಅದು ಕೆಸರಿನಲ್ಲೇ ವಾಸಿಸುತ್ತಿದ್ದರೂ ಕೆಸರನ್ನು ಮಾತ್ರ ಮೈಗೆ ಅಂಟಿಸಿಕೊಳ್ಳುವುದಿಲ್ಲ." ಈ ಬಗೆಯ ಪರಿಪಕ್ವತೆಯನ್ನು ಪಡೆಯಬೇಕಾದರೆ, ಸ್ವಲ್ಪ ಕಾಲ ನಿರ್ಜನ ಪ್ರದೇಶದಲ್ಲಿ ಕಳೆಯಬೇಕು. ಆ ಏಕಾಂತವಾಸದಲ್ಲಿ ಭಗವಂತನ ಕಡೆಗೆ ಮನಸ್ಸನ್ನು ತಿರುಗಿಸಿ, ಅತ್ಯಂತ ವ್ಯಾಕುಲಚಿತ್ತದಿಂದ ಆತನ ಪಾದಪದ್ಮಗಳಲ್ಲಿ ತನಗೆ ಭಕ್ತಿಯುಂಟಾಗುವಂತೆ ಆತನಿಗೆ ಸರ್ವದಾ ಪ್ರಾರ್ಥನೆ ಮಾಡಿಕೊಳ್ಳುತ್ತಿರಬೇಕು. ಶ್ರೀರಾಮಕೃಷ್ಣರು ನಾವು ಹೇಗೆ ಪ್ರಾರ್ಥನೆ ಮಾಡಬೇಕೆಂದು ಕೂಡ ತಿಳಿಸಿಕೊಡುತ್ತಿದ್ದಾರೆ: "ಮನಸ್ಸಿನಲ್ಲಿಯೇ ಹೇಳಿಕೊಳ್ಳುತ್ತಿರಬೇಕು: 'ನನ್ನವರು ಈ ಸಂಸಾರದಲ್ಲಿ ಯಾರೂ ಇಲ್ಲ. ಯಾರನ್ನು ನಾನು ನನ್ನವರು ಎಂದು ಭಾವಿಸುತ್ತಿದ್ದೇನೋ ಅವರ ಬಾಳುವೆ ಒಂದೆರಡು ದಿವಸಗಳದ್ದು ಮಾತ್ರವೇ. ಭಗವಂತನೊಬ್ಬನೇ ನನ್ನ ಸ್ವಂತದವ. ಆತನೇ ನನ್ನ ಸರ್ವಸ್ವ. ಅಯ್ಯೋ! ಆತನನ್ನು ನಾನು ಪಡೆದುಕೊಳ್ಳುವ ಬಗೆ ಹೇಗೆ?"

## ಪ್ರಪಂಚದ ಬಗ್ಗೆ ನಮ್ಮ ಭಾವನೆ

ನಾವು ವಾಸಿಸುವ, ಅನುಭವಿಸುವ ನಮ್ಮ ಸುತ್ತಮುತ್ತಲ ಪ್ರಪಂಚ ನಮ್ಮ ಚಿಂತನೆ, ಭಾವನೆ ಮತ್ತು ನಡವಳಿಕೆಗಳ ಮೇಲೆ ಸಂಪೂರ್ಣ ಪ್ರಭಾವವನ್ನು ಬೀರುವುದು. ಹೀಗಾಗಿ ಪ್ರಪಂಚದ ಬಗೆಗಿನ ನಮ್ಮ ತಿಳಿವಳಿಕೆಯು ನಮ್ಮ ಆಧ್ಯಾತ್ಮಿಕ ವಿಕಸನದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಶ್ರೀರಾಮಕೃಷ್ಣರ ಪ್ರಕಾರ, ಈ ಜಗತ್ತು ಭಗವಂತನ ಐಶ್ವರ್ಯ. ಆಕಾಶ, ನಕ್ಷತ್ರ, ಚಂದ್ರ, ಸೂರ್ಯ, ಪರ್ವತ, ಸಮುದ್ರ, ಜೀವಜಂತುಗಳು – ಇವೆಲ್ಲವನ್ನೂ ಭಗವಂತನೇ ಸೃಷ್ಟಿಸಿದ್ದಾನೆ. ಆತ ನಮ್ಮ ಅಂತರ್ಯದಲ್ಲಿಯೂ ಇದ್ದಾನೆ, ಹೊರಗೂ ಇದ್ದಾನೆ. ಆತನೇ ಈ ೨೪ ತತ್ತ್ವಗಳು – ಜೀವ ಜಗತ್ತು ಎಲ್ಲವೂ ಆಗಿದ್ದಾನೆ. ಜಗತ್ತನ್ನು ಸೃಷ್ಟಿಮಾಡುವ ಭಗವಂತನ ಶಕ್ತಿಯನ್ನು 'ಆದ್ಯಾಶಕ್ತಿ' ಎಂದು ಶ್ರೀರಾಮಕೃಷ್ಣರು ಬಣ್ಣಿಸುತ್ತಾರೆ. ಅವಳಿಗೆ ಕಾಳಿ ಎಂದು ಹೆಸರು. ಕಾಳಿಯೇ ಬ್ರಹ್ಮ, ಬ್ರಹ್ಮನೇ ಕಾಳಿ.

ಹೀಗೆ ಭಗವಂತನಿಂದ ಹುಟ್ಟಿದ ಜಗತ್ತಿಗೆ ಭಗವಂತನೇ ಆಧಾರಭೂತನಾಗಿದ್ದಾನೆ. ಅದನ್ನು ಶ್ರೀರಾಮಕೃಷ್ಣರು ಹೀಗೆ ವಿವರಿಸುತ್ತಾರೆ: "ಸೃಷ್ಟಿಮಾಡಿದ ನಂತರ ಆದ್ಯಾಶಕ್ತಿ ಈ ಜಗತ್ತಿನ ಒಳಗೇ ಇರುತ್ತಾಳೆ. ಈ ಜಗತ್ತನ್ನು ಹೆತ್ತು ಅದರೊಳಗೇ ಅಂತರ್ಗತಳಾಗಿರುತ್ತಾಳೆ...." ಭಗವಂತ ಈ ಆಧಾರ, ಆಧೇಯ ಎರಡೂ ಆಗಿದ್ದಾನೆ." ಜಗತ್ತು ಭಗವಂತನ ಲೀಲೆಯಲ್ಲದೆ ಬೇರಲ್ಲ. ಶ್ರೀರಾಮಕೃಷ್ಣರು ಹೇಳುವಂತೆ, ಭಗವತಿ ಲೀಲಾಮಯಿ, ಈ ಜಗತ್ತು ಭಗವತಿಯ ಕ್ರೀಡೆ.

ಈ ಜಗತ್ತು ಸತ್ಯವೇ ಅಥವಾ ಮಿಥ್ಯವೇ? ಶ್ರೀರಾಮಕೃಷ್ಣರು ಜಗತ್ತಿನ ವಸ್ತುಗಳ ನಶ್ವರತೆಯನ್ನು ನಮ್ಮ ಮುಂದೆ ಬಿಚ್ಚಿಡುತ್ತಾರೆ. ಆ ಮೂಲಕ ಜಗತ್ತಿನ ಬಗ್ಗೆ ವೈರಾಗ್ಯದ ಆವಶ್ಯಕತೆಯನ್ನು ಒತ್ತಿಹೇಳುತ್ತಾರೆ. ಅವರ ಪ್ರಕಾರ ಮಿಥ್ಯೆ ಎಂದರೆ ನಿರಪೇಕ್ಷವಲ್ಲದ, ಚಿರಂತನ ಮೌಲ್ಯವಿಲ್ಲದ ನಶ್ವರತೆ ಎಂದರ್ಥ. ಈ ವಿಷಯದಲ್ಲಿ ಗುರುದೇವರು ಒಬ್ಬ ತಾರ್ಕಿಕನ ಹಾಗೆಯೋ, ತತ್ತ್ವಶಾಸ್ತ್ರಜ್ಞನ ಹಾಗೆಯೋ ವಿಚಾರ ಮಾಡುವುದಿಲ್ಲ. ಯಾರೋ ಒಬ್ಬರು ಈ ಬಗ್ಗೆ ಕೇಳಿದಾಗ, "ಅಪ್ಪಾ, ಈ ಪಾಂಡಿತ್ಯದ ವಿದ್ಯೆಯ ಸೂಕ್ಷ್ಮ ಸಂಗತಿಗಳು ನನಗೆ ಗೊತ್ತಿಲ್ಲ. ನನ್ನ ಆತ್ಮವನ್ನು ನಾನು ಅರಿತಿರುವೆ, ಹಾಗೆಯೇ ನನ್ನ ಜಗನ್ಮಾತೆಯನ್ನು ಸಹ" ಎಂದು ಅವರು ಉತ್ತರ ಕೊಡುತ್ತಾರೆ. ಮತ್ತೊಮ್ಮೆ, "ನನ್ನ ಈ ಕಣ್ಣುಗಳಿಂದಲೇ, ಭಗವಂತನೇ ಇವೆಲ್ಲವೂ ಆಗಿರುವುದನ್ನು ನೋಡಿದ್ದೇನೆ. ಆದ್ದರಿಂದ ನಾನೇಕೆ ತರ್ಕ ಮಾಡಲಿ?" ಎನ್ನುತ್ತಾರೆ. ಶ್ರೀರಾಮಕೃಷ್ಣರು ಇಲ್ಲಿ ತಾರ್ಕಿಕನ ಪಾತ್ರವನ್ನು ವಹಿಸಲು ನಿರಾಕರಿಸುವುದರ ಮೂಲಕ, ಜಗತ್ತಿನ ಬಗ್ಗೆ ಯಾವುದೇ ನಿರ್ದಿಷ್ಟ ತಾತ್ತ್ವಿಕ ನಿಲುವನ್ನು ಬೆಂಬಲಿಸಲು ಕೂಡ ತಮ್ಮ ಅಸಮ್ಮತಿಯನ್ನು ತೋರಿಸುತ್ತಿದ್ದಾರೆ. ಅವರಿಗೆ ಜಗತ್ತು ಭಗವನ್ಮಯವಾಗಿ ಕಾಣುತ್ತದೆ; ಭಗವಂತನ ಕ್ರೀಡೆ ಅಥವಾ ಲೀಲೆಯಾಗಿ ತೋರುತ್ತದೆ. ಈ ಅಂಶಕ್ಕೆ ಅವರು ಪ್ರಾಧಾನ್ಯತೆ ಕೊಡುತ್ತಾರೆ. ಹೀಗಾಗಿ, ಈ ಜಗತ್ತನ್ನು ಭಗವಂತನ ಧಾಮವೆಂಬಂತೆ ಪರಿಗಣಿಸಿರಿ ಎಂದು ಬೋಧಿಸುತ್ತಾರೆ.

ಮೇಲಿನ ಉಪದೇಶದ ಮೂಲಕ ಜಗತ್ತಿನ ಬಗೆಗಿನ ನಮ್ಮ ದೃಷ್ಟಿಕೋನವನ್ನು ಶ್ರೀರಾಮಕೃಷ್ಣರು ಸರಿಪಡಿಸುತ್ತಾರೆ. ವೈಪರೀತ್ಯ ಮತ್ತು ವೈವಿಧ್ಯಮಯವಾದ ಈ ಜಗತ್ತು ಭಗವಂತನ ಶಕ್ತಿಯ ಪ್ರತೀಕ, ಭಗವಂತನೇ ಈ ಜೀವಿಗಳು ಮತ್ತು ಜಗತ್ತು – ಎರಡೂ ಆಗಿದ್ದಾನೆ ಎನ್ನುವುದನ್ನು ಹೇಳಿಕೊಡುತ್ತಿದ್ದಾರೆ. ಇದರಿಂದ ಜಗತ್ತಿನ ವಿಷಯದಲ್ಲಿ ನಮ್ಮ ನಿಲುವು ಉನ್ನತವಾಗುತ್ತದೆ. ಇದರ ನಶ್ವರತೆ ಮತ್ತು ದುಃಖಗಳ ಹಿಂದಿನ ಭಗವಂತನ ಲೀಲೆಯ ರಹಸ್ಯ ಗೋಚರವಾಗುತ್ತದೆ. ಈ ಪ್ರಬುದ್ಧ ಅರಿವು ನಮ್ಮ ಜೀವನವು ಹೆಚ್ಚು ಸಹ್ಯವೂ ಅರ್ಥಪೂರ್ಣವೂ ಆಗುವುದಕ್ಕೆ ಸಹಾಯ ಮಾಡುತ್ತದೆ.

### ದೇವರು ಎಂದರೆ ಯಾರು?

ಮನುಷ್ಯರು ಮತ್ತು ಪ್ರಪಂಚ ನಮ್ಮ ಅನುಭವಕ್ಕೆ ಬರುವಂಥ ಸಂಗತಿಗಳು. ಆದರೆ ದೇವರು ನಮ್ಮ ಅನುಭವಕ್ಕೆ ಬರುವುದಿಲ್ಲ. ಅವನು ಅತೀಂದ್ರಿಯನು ಎಂದು ಶಾಸ್ತ್ರಗಳು, ದೊಡ್ಡವರು ಹೇಳುತ್ತಾರೆ. ಹಾಗಾದರೆ ಅವನನ್ನು ತಿಳಿದುಕೊಳ್ಳುವುದು ಹೇಗೆ?

> **ನಿನ್ನ ಬಾಳಿನ ಹೊಲವು ಪಾಳುಬಿದ್ದಿಹುದಲ್ಲೋ**
> **ಕೃಷಿಗೈಯಲೂ ಕೂಡ ತಿಳಿಯದಿರುವೆ!**
> **ಎಂಥ ಹೊನ್ನನು ಬೆಳೆದು ತೆಗೆಯಬಹುದಾಗಿತ್ತೋ**
> **ಕೆಲವು ದಿನ ಮೈಮುರಿದು ದುಡಿದಿದ್ದರೆ**
>
> **ಇಂದೊ ನಾಳೆಯೊ ಹೊಲವ**
> **ಹೊಲದೊಡೆಯಗೊಪ್ಪಿಸುವ**
> **ಮುನ್ನವೇ ಎಚ್ಚೆತ್ತು ಬೆಳೆಯ ತೆಗೆಯೋ,**
> **ಗುರುವಿತ್ತ ಮಂತ್ರವನು ಬೀಜವಾಗಿಸಿ ಬಿತ್ತಿ**
> **ಪ್ರೇಮವಾರಿಯ ಹೊಯ್ದು ಹಸನುಗೊಳಿಸೋ**
> **ನಿನಗೆ ಈ ಕೆಲಸವೂ ಕಷ್ಟವಾದರೆ ಹೇಳು,**
> **ರಾಮಪ್ರಸಾದನಿದೊ ನೆರವಿಗಿಹನೋ!**
>
> – 'ವಚನವೇದ' ದ ಹಾಡು

ಶ್ರೀರಾಮಕೃಷ್ಣರ ಪ್ರಕಾರ ದೇವರನ್ನು ನಮ್ಮ ಸಾಧಾರಣ ಬುದ್ಧಿ ಮನಸ್ಸುಗಳಿಂದ ತಿಳಿದುಕೊಳ್ಳಲು ಆಗುವುದಿಲ್ಲ. ಅದಕ್ಕೆ ಅವರು ಉಪ್ಪಿನ ಬೊಂಬೆಯ ಉದಾಹರಣೆಯನ್ನು ಕೊಡುತ್ತಾರೆ. ಅದು ಸಮುದ್ರದ ಆಳವನ್ನು ಕಂಡುಹಿಡಿಯಲು ಹೋಯಿತಂತೆ. ಆದರೆ ಅದಕ್ಕೆ ಹಾಗೆ ಮಾಡಲು ಸಾಧ್ಯವಾಗಲೇ ಇಲ್ಲ. ಏಕೆಂದರೆ ಇಳಿಯುವುದೇ ತಡ, ಅದು ಕರಗಿಹೋಯಿತು. ಮನುಷ್ಯ ಎಷ್ಟೇ ದೊಡ್ಡವನಾಗಿದ್ದರೂ ಭಗವಂತನ ವಿಷಯವಾಗಿ ಏನು ತಾನೇ ಅರಿತುಕೊಳ್ಳಬಲ್ಲ?

ನಾವು ಈ ಜಗತ್ತನ್ನು ಅರಿತುಕೊಳ್ಳಲು ಯಾವ ಮಾನದಂಡಗಳನ್ನು ಇಟ್ಟುಕೊಂಡಿದ್ದೇವೆಯೋ ಅವುಗಳಿಗೆ ದೇವರು ಸಿಕ್ಕುವುದಿಲ್ಲ. ಆತ ವಿದ್ಯೆ ಅವಿದ್ಯೆಗಳಿಗೆ ಅತೀತನಾಗಿದ್ದಾನೆ. ಸುಖ ದುಃಖ ಇವುಗಳೆಲ್ಲ ಜೀವಿಗೆ ಸಂಬಂಧಿಸಿದ್ದು. ಅವೆಲ್ಲ ಮಾಯೆಗೆ ಸೇರಿದವು. ಬ್ರಹ್ಮ ಅವುಗಳಿಂದ ನಿರ್ಲಿಪ್ತ. ಮಾಯೆ ಬ್ರಹ್ಮನ ಶಕ್ತಿಯೇನೋ ಸರಿಯೇ. ಆದರೆ, ಹಾವಿನಲ್ಲಿರುವ ವಿಷದಂತೆ ಅದು. ಅದು ಬೇರೆಯವರನ್ನು ಕಡಿದಾಗ ಅವರು ಮಾತ್ರ ಸತ್ತುಹೋಗುತ್ತಾರೆ. ಆದರೆ ಹಾವಿಗೆ ಅದರಿಂದ ಏನೂ ಆಗದು. ಹಾಗೆಯೇ ಮಾಯೆಯು ಬ್ರಹ್ಮನನ್ನು ಏನೂ ಮಾಡದು. ಭಗವಂತ ಮತ್ತು ಅವನ ಶಕ್ತಿ ಇವುಗಳಲ್ಲಿ ಶ್ರೀರಾಮಕೃಷ್ಣರು ಯಾವ ವ್ಯತ್ಯಾಸವನ್ನೂ ಕಾಣುವುದಿಲ್ಲ. ಅವರ ಪ್ರಕಾರ ಯಾರು ಬ್ರಹ್ಮನೋ ಆತನೇ ಆದ್ಯಾಶಕ್ತಿ. ಇರುವುದು ಒಂದೇ. ಹೀಗೆ ಭಗವತತ್ತ್ವದ ಸರ್ವಾಂಗೀಣತೆಯನ್ನು ಶ್ರೀರಾಮಕೃಷ್ಣರು ಒತ್ತಿಹೇಳುತ್ತಾರೆ.

ಭಗವಂತನು ಕ್ರೂರಿ ಎಂದು ಕೆಲವರು ವಾದಿಸುತ್ತಾರೆ. ಜಗತ್ತಿನಲ್ಲಿ ಕಂಡುಬರುವ ಅಪಾರ ದುಃಖಕ್ಕೆ ಅವನೇ ಕಾರಣ ಎಂದು ಭಾವುಕತೆಯಿಂದ ಹೇಳುತ್ತಾರೆ. ಆದರೆ, ಈ ವಿಚಾರದಲ್ಲಿ ಶ್ರೀರಾಮಕೃಷ್ಣರು ವಾಸ್ತವ ದೃಷ್ಟಿಯನ್ನು ತಾಳುತ್ತಾರೆ. ಅವರ ಪ್ರಕಾರ, ಭಗವಂತನ ಕಾರ್ಯವನ್ನು, ಅವನ ಉದ್ದೇಶವನ್ನು ನಾವು ಅರಿಯಲು ಸಾಧ್ಯವಿಲ್ಲ. ಆತ ಸೃಷ್ಟಿ, ಪಾಲನೆ, ಸಂಹಾರ ಎಲ್ಲವನ್ನೂ ಮಾಡುತ್ತ ಇದ್ದಾನೆ. ಆತ ಏತಕ್ಕೆ ಸಂಹಾರ ಮಾಡುತ್ತಾನೆ ಎಂಬುದನ್ನು ನಮಗೆ ಅರಿತುಕೊಳ್ಳಲು ಸಾಧ್ಯವೇ ಎಂದು ಅವರು

ಪ್ರಶ್ನಿಸುತ್ತಾರೆ. ಅದಲ್ಲದೆ, ಭಗವಂತನೇ ಈ ಜೀವಿಗಳ ರೂಪದಲ್ಲಿ ಕ್ರೀಡಿಸುತ್ತಿದ್ದಾನೆ. ಹೀಗಾಗಿ ದುಃಖಪಡುವುದೂ ಆ ಭಗವಂತನೇ ಅಲ್ಲವೇ? ಏಕೆಂದರೆ ಭಗವಂತನ ಹೊರತು ಈ ಜಗತ್ತಿನಲ್ಲಿ ಏನೂ ಇಲ್ಲ.

ಇನ್ನು ಭಗವಂತನ ಸ್ವರೂಪದ ವಿಚಾರ. ಇದಂತೂ ಸಾವಿರಾರು ವರ್ಷಗಳಿಂದ ವಿವಾದಾಸ್ಪದವಾದ ವಿಷಯ. ಅದಕ್ಕೆ ಶ್ರೀರಾಮಕೃಷ್ಣರು ನೀಡುವ ಪರಿಹಾರ ಸರಳವಾದುದು, ಚೇತೋಹಾರಿಯಾದುದು. ಅವರ ಪ್ರಕಾರ, ಯಾವುದಾದರೂ ಒಂದು ಭಾವನೆಯಲ್ಲಿ ವಿಶ್ವಾಸವಿದ್ದರೆ ಅದೇ ಯಥೇಷ್ಟ ಆದರೆ ಅದೊಂದೇ ಸತ್ಯ, ಉಳಿದುದೆಲ್ಲ ಮಿಥ್ಯೆ ಎಂದು ಎಂದಿಗೂ ಯೋಚಿಸಬಾರದು. ಅವರು ಹೇಳುತ್ತಾರೆ, "ನಿರಾಕಾರವೂ ಸತ್ಯ, ಸಾಕಾರವೂ ಸತ್ಯ. ಯಾವುದರಲ್ಲಿ ವಿಶ್ವಾಸವೋ ಅದರಲ್ಲಿ ದೃಢಬುದ್ಧಿಯನ್ನು ಇಡು" ಎಂದು.

ಹಾಗೆಯೆ ಪೂಜಾವಿಧಾನಗಳಲ್ಲೂ ಶ್ರೀರಾಮಕೃಷ್ಣರದು ಉದಾರವಾದ ಮನೋಭಾವ. ಅವರು ಹೇಳುವಂತೆ, ಹಲವಾರು ವಿಧದ ಪೂಜಾಕ್ರಮಗಳನ್ನು ಭಗವಂತನೇ ಏರ್ಪಡಿಸಿದ್ದಾನೆ. ಆತನೇ ಅಧಿಕಾರಭೇದಕ್ಕೆ ಅನುಗುಣವಾಗಿ ಇದನ್ನೆಲ್ಲ ಮಾಡಿದ್ದಾನೆ. ಪೂಜೆಯ ವಿಧಾನದಲ್ಲಿ ದೋಷವಿರಬಹುದು. ಆದರೆ, ಅದರ ಮೂಲಕ ತನ್ನ ಪೂಜೆಯೇ ನಡೆಯುತ್ತಿದೆ ಎಂದು ದೇವರು ಅರಿಯನೇ? ಆತ ಆ ವಿಧದ ಪೂಜೆಯಿಂದಲೇ ತೃಪ್ತನಾಗುತ್ತಾನೆ.

**ಶ್ರೀರಾಮಕೃಷ್ಣರ ಪಾಲಿಗೆ ದೇವರು ಬರಿಯ ನಂಬುಗೆಯ ಸಂಗತಿಯಲ್ಲ, ಅದು ಜೀವಂತ ಚೈತನ್ಯರೂಪ. ದೇವರ ಅಸ್ತಿತ್ವಕ್ಕೆ ಅವರು ಕೊಡುವುದು ಸ್ವಂತ ಅನುಭವದ ಪ್ರಮಾಣ. ತಮ್ಮ ಅನುಭವವನ್ನು ಮುಂದಿಟ್ಟು, ಅವರು ಬೋಧಿಸುತ್ತಾರೆ. ಹೀಗಾಗಿ ಅವರ ಅಭಿಪ್ರಾಯಗಳಲ್ಲಿ ಪರಿಪೂರ್ಣ ಪ್ರಾಮಾಣಿಕತೆ ಇದೆ; ಅಧಿಕೃತತೆ ಇದೆ. ಅಂತಹ ಒಂದು ಅನುಭವದ ಬಗ್ಗೆ ಅವರು ಹೀಗೆ ಹೇಳುತ್ತಾರೆ: "ಭಗವತಿ ನನಗೆ ಕಾಳೀದೇವಾಲಯದಲ್ಲಿ ತೋರಿಸಿದಳು – ತಾನೇ ಎಲ್ಲವೂ ಆಗಿರುವುದನ್ನು, ಎಲ್ಲವೂ ಚಿನ್ಮಯವೇ ಆಗಿರುವುದನ್ನು."**

ಶ್ರೀರಾಮಕೃಷ್ಣರು ಸಮನ್ವಯಮೂರ್ತಿ. ಎಲ್ಲ ಉದಾತ್ತ ವಿಚಾರಗಳು, ದರ್ಶನಗಳು, ತತ್ತ್ವಗಳು, ಮತಪಂಥಗಳು ಅವರಲ್ಲಿ ಸಮನ್ವಯವಾಗುವುವು. ಅದೇ ರೀತಿ ಎಲ್ಲ ತಾತ್ತ್ವಿಕ ಪ್ರಭೇದಗಳೂ ಸಾಮರಸ್ಯವನ್ನು ಕಂಡುಕೊಳ್ಳುವುವು. ನಾವು ಇದುವರೆಗೆ ವಿಚಾರ ಮಾಡಿದ **ಜೀವಿ-ಜಗತ್ತು-ದೇವರು** – ಇವು ಕೂಡ ಶ್ರೀರಾಮಕೃಷ್ಣರ ಅನುಭಾವದ ಬೆಳಕಿನಲ್ಲಿ ಸಮನ್ವಯಗೊಳ್ಳುತ್ತವೆ. ಅವರೇ ಹೀಗೆ ಹೇಳುತ್ತಾರೆ: "ಭಗವಂತನ ಸಾಕ್ಷಾತ್ಕಾರ ಮಾಡಿಕೊಂಡರೆ ಕಂಡುಬರುತ್ತದೆ, ಆತನೇ ಜೀವ ಜಗತ್ತು ಆಗಿರುವುದಾಗಿ. ಕೇವಲ ವಿಚಾರದಿಂದ ಈ ಅನುಭವವನ್ನು ಪಡೆಯಲಾಗುವುದಿಲ್ಲ." ಈ ಬಗೆಯ ಪಾರಮಾರ್ಥಿಕ ಸಂಗತಿಗಳಲ್ಲಿ ಅನುಭವವೇ ಶ್ರೇಷ್ಠ ಪ್ರಮಾಣ ಎನ್ನುವುದು ಶ್ರೀರಾಮಕೃಷ್ಣರ ನಿಲುವು. ಅದಕ್ಕೇ ಅವರು ಹೇಳುತ್ತಾರೆ, "ಯಾವುದೇ ಆಗಲಿ, ವಿಚಾರದ ಮೂಲಕ ಒಂದು ವಿಧವಾಗಿ ತೋರುತ್ತದೆ. ಆ ವಸ್ತುವೇ ಭಗವಂತ ತೋರಿಸಿದಾಗ, ಸಂಪೂರ್ಣ ಬೇರೆ ರೀತಿಯಾಗಿ ತೋರಿಬರುತ್ತದೆ." ಇಲ್ಲಿ ವಿಚಾರವು ಸ್ವಾನುಭವಕ್ಕೆ ಅಧೀನವಾಗುವುದನ್ನು ಕಾಣಬಹುದು.

### ಆಧ್ಯಾತ್ಮಿಕ ಸಾಧನೆ

ಶ್ರೀರಾಮಕೃಷ್ಣರಿಗೆ ಒಣ ತಾತ್ತ್ವಿಕ ತರ್ಕಗಳು, ವಾದಗಳು ಬೇಕಾಗಿರಲಿಲ್ಲ. ಅವರ ಪ್ರಕಾರ ಸಾಧನೆ ಮಾಡಿ ಕಂಡುಕೊಂಡರೆ, ಎಲ್ಲ ಪ್ರಶ್ನೆ, ಸಂದೇಹಗಳಿಗೂ ಉತ್ತರ ಸಿಕ್ಕುತ್ತದೆ. ಹೀಗಾಗಿ ಅವರ ಉಪದೇಶಗಳಲ್ಲಿ ಸಾಧನೆಗೇ ಪ್ರಾಶಸ್ತ್ಯ. ಏಕೆ ತಾನೇ ಸಾಧನೆ ಮಾಡಬೇಕು? ಇದು ಮೂಲಭೂತವಾದ ಪ್ರಶ್ನೆ. ಶ್ರೀರಾಮಕೃಷ್ಣರು ಖಡಾಖಂಡಿತವಾಗಿ ಹೇಳುತ್ತಾರೆ, "ಸತ್ಯವಾಗಿ ಹೇಳುತ್ತೇನೆ. ನೀವು ಸಂಸಾರದಲ್ಲಿ ಇದ್ದೀರಿ. ಅದು ದೋಷವಾದದ್ದೇನಲ್ಲ. ಆದರೆ ನೀವು ಭಗವಂತನ ಕಡೆಗೆ ಮನಸ್ಸನ್ನು ತಿರುಗಿಸಿ ಇಡಬೇಕು. ಇಲ್ಲದಿದ್ದರೆ ನೀವು ಜಯಶಾಲಿಗಳಾಗೋದಿಲ್ಲ." ಅವರ ಪ್ರಕಾರ ಮನಸ್ಸೇ ಎಲ್ಲದಕ್ಕೂ ಕಾರಣ. ಅದರಿಂದಲೇ ಬಂಧನ, ಅದರಿಂದಲೇ ಮುಕ್ತಿ. ಆದ್ದರಿಂದ ಮನಸ್ಸನ್ನು ಶುದ್ಧಮಾಡಿಕೊಳ್ಳುವುದು ಬಹಳ ಮುಖ್ಯ. ಭಗವಂತನ ನಾಮ ಜಪಿಸಿದರೆ ಮನುಷ್ಯನ ದೇಹ ಮತ್ತು ಮನಸ್ಸು ಎಲ್ಲವೂ ಶುದ್ಧವಾಗಿಬಿಡುತ್ತದೆ. ಅದಕ್ಕೆ ಸಾಧನೆ ಅತ್ಯವಶ್ಯಕ.

ಶ್ರೀರಾಮಕೃಷ್ಣರು ಏಕಾಂತದಲ್ಲಿ ಸಾಧನೆ ಮಾಡುವುದಕ್ಕೆ ಬಹಳ ಮಹತ್ವ ಕೊಡುತ್ತಾರೆ. ಸಂಸಾರದಲ್ಲಿರುವವರೂ ಒಮ್ಮೊಮ್ಮೆ ನಿರ್ಜನಪ್ರದೇಶಕ್ಕೆ ಹೋಗಿ ಭಗವಂತನ ಸಾಕ್ಷಾತ್ಕಾರಕ್ಕಾಗಿ ಸಾಧನೆ ಮಾಡಬೇಕು. ಸಾಧನೆಯಿಂದ ವಿವೇಕ ವೈರಾಗ್ಯಗಳನ್ನು ಗಳಿಸಿಕೊಂಡು, ಅನಂತರವೇ ಸಂಸಾರದಲ್ಲಿ ಕಾಲಿಡಬೇಕು ಎನ್ನುವುದು ಶ್ರೀರಾಮಕೃಷ್ಣರ ಕಿವಿಮಾತು. ಹಾಗೆ ಮಾಡಿದರೆ ಮಾತ್ರವೇ ಕಾಮಕ್ರೋಧಾದಿಗಳ ಉಪಟಳ ಇರುವುದಿಲ್ಲ. ವಿವೇಕವೈರಾಗ್ಯಗಳ ಬಗ್ಗೆ ಶ್ರೀರಾಮಕೃಷ್ಣರು ಸೊಗಸಾಗಿ ಹೀಗೆ ಹೇಳುತ್ತಾರೆ: "ಸದಸದ್ವಿಚಾರಕ್ಕೆ ವಿವೇಕ ಎಂದು ಹೆಸರು. ಭಗವಂತನೇ ಸತ್, ನಿತ್ಯವಸ್ತು; ಉಳಿದುದೆಲ್ಲಾ ಅಸತ್, ಅನಿತ್ಯ ವಸ್ತು – ಈ ಎರಡು ದಿನದ ಬಾಳಿನವು ಎಂಬುದೇ ಜ್ಞಾನ. ಭಗವಂತನಲ್ಲಿ ಅನುರಾಗ ಬೆಳೆಸಿಕೊಳ್ಳಬೇಕು, ಆತನ ಕಡೆಗೆ ಮನಸ್ಸು ಹರಿಯುವಂತೆ ಮಾಡಿಕೊಳ್ಳಬೇಕು, ಆತನನ್ನು ಪ್ರೀತಿಸಬೇಕು."

ಪ್ರಪಂಚದ ಕೆಲಸಕಾರ್ಯಗಳ ನಡುವೆ ಆಧ್ಯಾತ್ಮಿಕ ಸಾಧನೆ ಸಾಧ್ಯವೇ? 'ಸಾಧ್ಯ' ಎನ್ನುತ್ತಾರೆ ಶ್ರೀರಾಮಕೃಷ್ಣರು. "ಭಗವಂತನ ಸಾಕ್ಷಾತ್ಕಾರ ದೊರಕದವರೆಗೆ ನಾವು ಎಲ್ಲಾ ಕೆಲಸಕಾರ್ಯಗಳನ್ನು ಬಿಟ್ಟುಬಿಡೋಣವೇ?" ಎಂಬ ಭಕ್ತನೊಬ್ಬನ ಪ್ರಶ್ನೆಗೆ, ಅವರು ಹೀಗೆ ಹೇಳುತ್ತಾರೆ: "ಇಲ್ಲ, ಹಾಗೇಕೆ ಮಾಡಬೇಕು? ಭಗವಚ್ಚಿಂತನೆ, ನಾಮಗುಣಕೀರ್ತನೆ, ನಿತ್ಯಕರ್ಮ ಇವೇ ಮೊದಲಾದುವುಗಳಲ್ಲಿ ತೊಡಗಿರಬೇಕು." "ಹಣ ಸಂಪಾದಿಸುವುದು ಇವೇ ಮೊದಲಾದುವನ್ನು?" ಎಂದು ಅದೇ ಭಕ್ತ ಪುನಃ ಕೇಳಿದಾಗ, ಅವರು ಮುಂದುವರಿಸುತ್ತಾರೆ, "ಹೌದು, ಅದನ್ನೂ ಮಾಡಬೇಕು – ಸಂಸಾರಯಾಪನೆಗೆ ಅತ್ಯವಶ್ಯಕವಾದುವುಗಳಷ್ಟು ಮಾತ್ರ. ಆದರೆ ಅದೇ ಸಮಯದಲ್ಲಿ, ನಿನ್ನ ಕರ್ಮಗಳನ್ನು ನೀನು ನಿಷ್ಕಾಮಭಾವನೆಯಿಂದ ಜರುಗಿಸಲು ಶಕ್ತನಾಗುವಂತೆ ಭಗವಂತ ಶಕ್ತಿ ದಯಪಾಲಿಸಬೇಕೆಂದು ಕಣ್ಣೀರು ಸುರಿಸುತ್ತ ಏಕಾಂತದಲ್ಲಿ ಅವನನ್ನು ಪ್ರಾರ್ಥಿಸಿಕೊಳ್ಳಬೇಕು..."

ಸಂಸಾರದಲ್ಲಿರುವ ಸಾಮಾನ್ಯ ಜನರು ಸುಲಭವಾಗಿ ಮಾಡಬಹುದಾದ ಸಾಧನೆ ಯಾವುದು? ಶ್ರೀರಾಮಕೃಷ್ಣರು ಕರುಣಾಳುಗಳು. ಅದರಲ್ಲೂ ಗೃಹಸ್ಥರನ್ನು ಕಂಡರೆ ಅವರಿಗೆ ತುಂಬ ದಯೆ. ಅದಕ್ಕಾಗಿಯೇ ಅವರು ಹೇಳುತ್ತಾರೆ, "ಕಲಿಯುಗಕ್ಕೆ ಭಕ್ತಿಯೋಗ, ನಾರದೀಯ ಭಕ್ತಿಯೇ ಶ್ರೇಷ್ಠ. ಭಗವಂತನ ನಾಮ ಗುಣಕೀರ್ತನೆ ಮಾಡುವುದು ಮತ್ತು ವ್ಯಾಕುಲತೆಯಿಂದ ಪ್ರಾರ್ಥನೆ ಮಾಡುವುದು, 'ಹೇ ಭಗವಂತ, ಜ್ಞಾನವನ್ನು ನೀಡು, ಭಕ್ತಿಯನ್ನು ಕರುಣಿಸು, ದರ್ಶನವನ್ನು ಕೊಡು.' ಕರ್ಮಯೋಗ ಬಹಳ ಕಠಿಣವಾದ್ದು. ಆದ್ದರಿಂದಲೇ ಪ್ರಾರ್ಥನೆ ಮಾಡಬೇಕು: 'ಹೇ ಭಗವಂತ, ನನ್ನ ಕೆಲಸಗಳನ್ನು ಕಡಿಮೆಮಾಡು. ಯಾವುದನ್ನು ಮಾಡಲೇಬೇಕಾಗಿದೆಯೋ ಅವೆಲ್ಲವನ್ನೂ ನಿನ್ನ ಕೃಪೆಯಿಂದ ಅನಾಸಕ್ತಿಯಿಂದ ಮಾಡಲಾಗುವಂತೆ ಪ್ರೇರೇಪಿಸು! ಕೆಲಸಗಳನ್ನು ಹೆಚ್ಚು ಮಾಡಿಕೊಳ್ಳುವ ಇಚ್ಛೆ ಕೂಡ ನನ್ನ ಹೃದಯದಲ್ಲಿ ಮೂಡದ ಹಾಗೆ ಮಾಡು." ಶ್ರೀರಾಮಕೃಷ್ಣರು ಹೇಳುವಂತೆ, "ಸಂಪೂರ್ಣವಾಗಿ ಕೆಲಸಗಳನ್ನು ಬಿಟ್ಟುಬಿಡಲು ಸಾಧ್ಯವಿಲ್ಲ. ಚಿಂತಿಸುವುದು, ಧ್ಯಾನ ಮಾಡುವುದು, ಇವೂ ಕರ್ಮವೇ. ಭಕ್ತಿಯುಂಟಾಯಿತು ಎಂದರೆ ವಿಷಯ ಕರ್ಮ ತನಗೆ ತಾನೇ ಕಡಿಮೆಯಾಗಿಬಿಡುತ್ತದೆ; ಮತ್ತೆ ಅವು ರುಚಿಸವು." ಇದೇ ಸಮಯದಲ್ಲಿ ಶ್ರೀರಾಮಕೃಷ್ಣರು ನಮಗೆ ಒಂದು ಎಚ್ಚರಿಕೆಯನ್ನೂ ಕೊಡುತ್ತಾರೆ, "ಜೀವನದ ಉದ್ದೇಶ ಭಗವಂತನ ಸಾಕ್ಷಾತ್ಕಾರ. ಕರ್ಮ, ಆದಿಕಾಂಡ. ಅದು ಜೀವನದ ಉದ್ದೇಶವಾಗಲಾರದು. ಆದರೆ ನಿಷ್ಕಾಮಕರ್ಮ ಒಂದು ಮಾರ್ಗವೇ ವಿನಾ ಉದ್ದೇಶ್ಯವಲ್ಲ."

ಬಗೆಬಗೆಯ ಸಾಧನೆಗಳಿವೆ. ಅವುಗಳಲ್ಲೆಲ್ಲ ಮೂಲಭೂತವಾಗಿ ಇರಬೇಕಾದ ಒಂದು ಅಂಶದ ಬಗ್ಗೆ ಶ್ರೀರಾಮಕೃಷ್ಣರು ಒತ್ತಿ ಹೇಳುತ್ತಾರೆ. ಅದೆಂದರೆ ವ್ಯಾಕುಲತೆ. ಶ್ರೀರಾಮಕೃಷ್ಣರದು 'ವ್ಯಾಕುಲತಾ ಯೋಗ'. ಅವರ ಸಾಧನೆ–ಬೋಧನೆಗಳಲ್ಲಿ ಹಾಸುಹೊಕ್ಕಾಗಿರುವ ಅಂಶ ಅದು. ಕೆಲಸ ಕಳೆದುಕೊಂಡ ಗುಮಾಸ್ತನ ವ್ಯಾಕುಲತೆಯ ಹಾಗೆ ಭಗವಂತನ ಮೇಲಿನ ವ್ಯಾಕುಲತೆ ಇರಬೇಕು. ಆತ ದಿನವೂ ಆಫೀಸುಗಳಿಗೆಲ್ಲ ಅಲೆಯುತ್ತಲೇ ಇರುತ್ತಾನೆ – ಕೆಲಸ ಖಾಲಿ ಇದೆಯೇ ಎಂದು ವಿಚಾರಿಸುತ್ತ. ವ್ಯಾಕುಲತೆಯಾಯಿತು ಎಂದರೆ ಮನುಷ್ಯ ಭಗವಂತನಿಗಾಗಿ ಸುಮ್ಮನೆ ಹಾತೊರೆಯುತ್ತಿರುತ್ತಾನೆ. ಈ ಬಗೆಯ ವ್ಯಾಕುಲತೆಯು ಆಧ್ಯಾತ್ಮಿಕ ಸಾಧನೆಗೆ ಪ್ರಾಮಾಣಿಕತೆಯನ್ನೂ ಗಂಭೀರತೆಯನ್ನೂ ಮೂಡಿಸುತ್ತದೆ. ಅದಕ್ಕೆಂದೇ ಶ್ರೀರಾಮಕೃಷ್ಣರು ಸಾಧಕರನ್ನು ಹುರಿದುಂಬಿಸುತ್ತಾರೆ, "ಇನ್ನೂ ಆಳಕ್ಕೆ ಮುಳುಗು. ಮೇಲೆ ಮೇಲೆ ತೇಲಿದರೆ ಅಥವಾ ಈಜಾಡಿದರೆ ರತ್ನ ದೊರೆಯುವುದೇ? ಆಳಕ್ಕೆ, ಆಳಕ್ಕೆ ಮುಳುಗಬೇಕು."

'ಶ್ರೀರಾಮಕೃಷ್ಣ ವಚನವೇದ' ಕೃತಿಯ ಪುಟಪುಟಗಳಲ್ಲಿಯೂ ಶ್ರೀರಾಮಕೃಷ್ಣರು ಮತ್ತೆ ಮತ್ತೆ ಹೇಳುವುದು, 'ಕಾಮಕಾಂಚನ ತ್ಯಾಗ'ದ ಬಗ್ಗೆ. ಅವರ ಪ್ರಕಾರ ನಾವೇನು ನೋಡುತ್ತೇವೆಯೋ, ಏನೇನು ಕಿವಿಯಿಂದ ಕೇಳುತ್ತೇವೆಯೋ, ಏನೇನು ಭಾವಿಸುತ್ತೇವೆಯೋ ಅವೆಲ್ಲವೂ ಮಾಯೆ. ಅವರು ಹೇಳುತ್ತಾರೆ, "ಒಂದೇ ಮಾತಿನಲ್ಲಿ ಹೇಳುವುದಾದರೆ, ಕಾಮಕಾಂಚನವೇ ಮಾಯೆಯ ಹೊದಿಕೆ. ಹೀಗಾಗಿ ಕಾಮಕಾಂಚನತ್ಯಾಗವೇ ಅತ್ಯಂತ ಅವಶ್ಯವಾದುದು. ಆ ತ್ಯಾಗವೇ ನಿಜವಾದ ತ್ಯಾಗ. ಅದಕ್ಕಾಗಿ ಗೃಹಸ್ಥರು ಸಾಧನೆ ಮಾಡಿ, ಭಕ್ತಿಯನ್ನು ಗಳಿಸಿಕೊಂಡು, ಮಾನಸಿಕವಾಗಿ ತ್ಯಾಗಮಾಡಬೇಕು. ಆದರೆ ಸಂನ್ಯಾಸಿ ಮಾನಸಿಕವಾಗಿ, ಬಾಹ್ಯಿಕವಾಗಿ – ಈ ಎರಡೂ ವಿಧದಿಂದಲೂ ತ್ಯಾಗ ಮಾಡಬೇಕು."

'ವಚನವೇದ'ದಲ್ಲಿ ಶ್ರೀರಾಮಕೃಷ್ಣರು ಭಗವಂತನನ್ನು ಹೃದಯಂಗಮವಾಗಿ ಪ್ರಾರ್ಥನೆ ಮಾಡಿಕೊಳ್ಳುವ ಅನೇಕ ಪ್ರಸಂಗಗಳು ಬರುತ್ತವೆ. ಈ ಮೂಲಕ ಅವರು ನಮಗೆ ಪ್ರಾರ್ಥನಾ ವಿಧಾನವನ್ನೂ ಹೇಳಿಕೊಡುತ್ತಾರೆ: "ಪ್ರಾಪಂಚಿಕ ವಸ್ತುಗಳಿಗೆ ನಾವು ಬೇಡದೆ ಇರೋಣ. ಆದರೆ ಭಕ್ತ ನಾರದನಂತೆ ಪ್ರಾರ್ಥಿಸೋಣ. ನಾರದನು ರಾಮಚಂದ್ರನನ್ನು ಕುರಿತು, 'ನಿನ್ನ ಪಾದಪದ್ಮಗಳ ಮೇಲೆ ಭಕ್ತಿಯನ್ನು ಅನುಗ್ರಹಿಸು' ಎಂದು ಕೇಳಿದನು. ಶ್ರೀರಾಮಚಂದ್ರನು, 'ಹಾಗೆಯೇ ಆಗಲಿ' ಎಂದನು. 'ಆದರೆ ನಿನಗೆ ಇನ್ನೂ ಏನೂ ಬೇಡವೇ? ' ಎಂದು ಕೇಳಿದನು. ಅದಕ್ಕೆ ನಾರದನು, 'ಭುವನವನ್ನೆಲ್ಲಾ ಮೋಹಿಸುವ ನಿನ್ನ ಮಾಯೆಯ ಬಲೆಗೆ ನಾನು ಬೀಳದಂತೆ ಅನುಗ್ರಹಿಸು' ಎಂದು ಕೇಳಿಕೊಂಡನು. ಶ್ರೀರಾಮಚಂದ್ರನು ಮತ್ತೊಮ್ಮೆ, 'ಹಾಗೆಯೇ ಆಗಲಿ. ಆದರೆ ನಿನಗೆ ಮತ್ತೇನೂ ಬೇಡವೇ? ' ಎಂದನು. ಅದಕ್ಕೆ ನಾರದನು, 'ಭಗವಂತ! ನನಗಿನ್ನೇನೂ ಬೇಡ. ನಾನು ಪ್ರಾರ್ಥಿಸುವುದು ಇಷ್ಟೆ' ಎಂದನು." ಇದು ಪ್ರಾರ್ಥನೆ ಹೇಗೆ ಮಾಡಬೇಕು ಎನ್ನುವುದರ ಬಗ್ಗೆ ಶ್ರೀರಾಮಕೃಷ್ಣರು ನೀಡುವ ನಿದರ್ಶನ.

### ಉಪಸಂಹಾರ

'ಶ್ರೀರಾಮಕೃಷ್ಣ ವಚನವೇದ' ವೆಂಬುದು ಆಧ್ಯಾತ್ಮಿಕ ವಿಶ್ವ ಕೋಶ; ಆಧುನಿಕ ಉಪನಿಷತ್ತು; ಅರ್ವಾಚೀನ ಭಗವದ್ಗೀತೆ. ಇದರಲ್ಲಿ ನಾವು ಕಾಣುವುದು ತತ್ತ್ವಸಂಗಮ, ಭಾವಸಂಗಮ ಮತ್ತು ಸಾಧನಸಂಗಮ. ಇಲ್ಲಿ ಮಾನವೀಯತೆಯು ಮಡುಗಟ್ಟಿ ನಿಂತಿದೆ; ದೈವಿಕತೆಯು ತನ್ನ ಅನಂತ ಉದ್ಗಲಗಳನ್ನು ಚಾಚಿ ಮೆರೆದಿದೆ. ವೇದೋಪನಿಷತ್ತುಗಳ ಋಷಿಭಾವ ಶ್ರೀರಾಮಕೃಷ್ಣರ ರೂಪದಲ್ಲಿ ಮೈದುಂಬಿ ಕಂಗೊಳಿಸುತ್ತಿದೆ. ಅದೇ ಸಮಯದಲ್ಲಿ, ಈ ನವಯುಗಾಚಾರ್ಯನ ವಿಶ್ವತೋಮುಖವಾದ ದರ್ಶನವು ಇಡೀ ಮಾನವತೆಯನ್ನು ತಬ್ಬಿಕೊಂಡಿದೆ. ಎಲ್ಲಕ್ಕಿಂತ ಹೆಚ್ಚಾಗಿ ಅಣೋರಣೀಯನೂ ಮಹತೋಮಹಿಮನೂ ಆದ ಭಗವಂತನು, ಶ್ರೀರಾಮಕೃಷ್ಣರ ರೂಪದಲ್ಲಿ, ಅವರ ಮಾತುಗಳಲ್ಲಿ, ಅವರ ಭಾವನೆಗಳಲ್ಲಿ ಅನಂತ ಮಿಂಚುನೋಟಗಳಲ್ಲಿ ಪ್ರಕಟವಾಗುತ್ತಿದ್ದಾನೆ.

ಶ್ರೀರಾಮಕೃಷ್ಣರು ನಮಗೆಲ್ಲ ನೀಡುವ ಪ್ರೀತಿಯ ಸಾಂತ್ವನ ಇದು:

**"ನನ್ನ ಪ್ರಿಯ ಬಾಲಕರೇ, ಭಗವಂತ ಚಿರಜಾಗೃತನು. ನೀವು ಅವನನ್ನು ಪ್ರಾರ್ಥಿಸಿದಾಗಲೆಲ್ಲ ಅವನು ಅದನ್ನು ಕೇಳಿರುವನು. ಯಾವತ್ತಾದರೂ ಒಂದು ದಿನ, ನಿಮ್ಮ ಕಡೆಯಕಾಲದಲ್ಲಾದರೂ ಒಂದು ದಿನ ಅವನು ನಿಜವಾಗಿ ನಿಮಗೆ ಕಾಣಿಸಿಕೊಳ್ಳುವನು."**